**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜುರವರು ಮಂಡಿಸಿರುವ ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ.**

*******

**ವಿಷಯ:** ವಯೋವೃದ್ಧರಿಗೆ ಮನೆಗಳಲ್ಲಿ ಕಿರುಕುಳ ನೀಡುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು, ಕೋಲಾರ ಜಿಲ್ಲೆಯಲ್ಲಿ ಸ್ಥಾಪಿಸಿರುವ ಹಿರಿಯ ನಾಗರಿಕರ ಸಹಾಯವಾಣಿಗೆ ತಿಂಗಳಿಗೆ 300ಕ್ಕೂ ಅಧಿಕ ದೂರುಗಳು ಬರುತ್ತಿದ್ದು, ಆಸ್ತಿ ದಾಖಲೆ ಪತ್ರಕ್ಕೆ ಸಹಿ ಹಾಕುವಂತೆ ಮಕ್ಕಳು ಹಿಂಸೆ ಕೊಡುವುದು, ಹೊತ್ತಿಗೆ ಸರಿಯಾಗಿ ಊಟ ಹಾಕುವುದಿಲ್ಲ, ಮಾತ್ರೆ, ಔಷಧಿ ತಂದು ಕೊಡುವುದಿಲ್ಲ, ಮಾನಸಿಕವಾಗಿ ಕಿರುಕುಳ ನೀಡುತ್ತಾರೆ. ಮನೆಯಿಂದ ಹೊರ ಹಾಕುತ್ತಾರೆ ಎಂದು ನೊಂದ ಹಿರಿಯ ಜೀವಗಳು ಸಹಾಯವಾಣಿಗೆ ಕರೆ ಮಾಡಿ ತಮ್ಮ ನೋವು ಹೇಳಿಕೊಳ್ಳುತ್ತಿದ್ದಾರೆ. ಹಲವಾರು ವೃದ್ಧರು ವೃದ್ಧಾಶ್ರಮಕ್ಕೆ ಸೇರಿಸುವಂತೆ ಕರೆ ಮಾಡುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಕೇವಲ ಕೋಲಾರ ಜಿಲ್ಲೆಯಲ್ಲಿಯೇ ತಿಂಗಳಿಗೆ 300 ದೂರು ಬರುತ್ತಿದ್ದರೆ, ಇಡೀ ರಾಜ್ಯಾದ್ಯಂತ ಎಷ್ಟು ದೂರುಗಳು ಬರಬಹುದು. ಸರ್ಕಾರ ಇದಕ್ಕೆ ತುರ್ತಾಗಿ ಪರಿಹಾರ ಹಾಗೂ ಸೂಕ್ತ ಕಾನೂನು ಮಾಡಬೇಕಾಗಿರುವುದು ಅನಿವಾರ್ಯವಾಗಿರುವ ಹಿನ್ನೆಲೆಯಲ್ಲಿ ಈ ವಿಷಯವನ್ನು ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

## ಉತ್ತರ

ರಾಜ್ಯದ 25 ಜಿಲ್ಲೆಗಳಲ್ಲಿ ಒಟ್ಟು 26 ಸಹಾಯವಾಣಿ ಕೇಂದ್ರಗಳು ಪೊಲೀಸ್ ಇಲಾಖೆಯ ನೆರವಿನೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಹಿರಿಯ ನಾಗರಿಕರಿಗೆ ಉಚಿತವಾಗಿ ಆರೋಗ್ಯ, ಆರ್ಥಿಕ ಮತ್ತು ಕಾನೂನಾತ್ಮಕವಾದ ಸಲಹೆ, ಮಾರ್ಗದರ್ಶನ, ಸಂಕಷ್ಟದಲ್ಲಿರುವವರ ಸಂರಕ್ಷಣೆ ಮುಂತಾದ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ದಿನದ 24/7 ಸಮಯ ಹಿರಿಯ ನಾಗರಿಕರ (ಟೋಲ್ ಫ್ರೀ) ಸಹಾಯವಾಣಿ ಕಾರ್ಯನಿರ್ವಹಿಸುತ್ತಿದೆ.

2024-25ನೇ ಸಾಲಿನಲ್ಲಿ ಈವರೆಗೆ ಕೋಲಾರ ಜಿಲ್ಲೆಯಲ್ಲಿನ 1900 ಕರೆಗಳನ್ನು ಒಳಗೊಂಡಂತೆ ರಾಜ್ಯಾದ್ಯಂತ 43,987 ಕರೆಗಳು ಆರೋಗ್ಯ, ಆರ್ಥಿಕ ಮತ್ತು ಕಾನೂನಾತ್ಮಕವಾದ ಸಲಹೆ, ಮಾರ್ಗದರ್ಶನ ಕೋರಿ ಜಿಲ್ಲಾ ಕೇಂದ್ರಗಳಲ್ಲಿ ಸ್ವೀಕೃತವಾಗಿರುತ್ತವೆ. ಸಹಾಯವಾಣಿ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಗಳಲ್ಲಿಯೇ ನಿರ್ವಹಿಸಲಾಗುತ್ತಿದೆ. ಸಹಾಯವಾಣಿ ಕೇಂದ್ರದಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಯೋಜನಾ ಸಂಯೋಜಕರು, ಎಂ.ಎಸ್.ಡಬ್ಲ್ಯೂ. ಪದವಿ ಹೊಂದಿರುವ 03 ಕೌನ್ಸಿಲರ್‌ಗಳು, 01 ಕಛೇರಿ ಸೇವಕರು ಹಾಗೂ 02 ಪೊಲೀಸ್ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

ಮುಂದುವರೆದು, ಹಿರಿಯ ನಾಗರಿಕರ ರಾಷ್ಟ್ರನೀತಿಯ ಸಮರ್ಪಕ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು 2007 ರಲ್ಲಿ ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಿದ್ದು, ಕರ್ನಾಟಕ ಸರ್ಕಾರವು ಸಹ ರಾಜ್ಯದಲ್ಲಿ ಸದರಿ ಕಾಯ್ದೆಯನ್ನು ದಿನಾಂಕ:01.04.2008ರಿಂದ ಅಳವಡಿಸಿ ಜಾರಿಗೊಳಿಸಿದೆ.

### "ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ-2007"

- ಪಾಲಕರಿಗೆ ಹಾಗೂ ಅಜ್ಜ, ಅಜ್ಜಿಯವರಿಗೆ ಅವರ ಮಕ್ಕಳು/ಮೊಮ್ಮಕ್ಕಳಿಂದ ಅವಶ್ಯವಾದ ಜೀವನ ನಿರ್ವಹಣೆಯನ್ನು ನೀಡಬಹುದಾಗಿರುತ್ತದೆ.
- ನಿಗದಿತ ಅವಧಿಯಲ್ಲಿ ಪಾಲಕರ ನಿರ್ವಹಣೆಯ ಹಕ್ಕಿನ ಅರ್ಜಿಯನ್ನು ಇತ್ಯರ್ಥ ಪಡಿಸಲು ನಿರ್ವಹಣಾ ನ್ಯಾಯಮಂಡಳಿಗಳನ್ನು ರಚಿಸಲಾಗಿರುತ್ತದೆ.
- ನಿರ್ವಹಣಾ ನ್ಯಾಯಮಂಡಳಿಯಡಿ ಪ್ರಕರಣದ ನಡವಳಿಯ ಯಾವುದೇ ಹಂತದಲ್ಲಿ ವಕೀಲರು ಬಾಗವಹಿಸುವುದನ್ನು ಕಾಯ್ದೆಯು ನಿರ್ಬಂಧಿಸುತ್ತದೆ.

- ಹಿರಿಯ ನಾಗರಿಕರ ಜೀವನ ಹಾಗೂ ಆಸ್ತಿಯ ರಕ್ಷಣೆ ಹಾಗೂ ಉತ್ತಮ ಆರೋಗ್ಯ ಸೌಲಭ್ಯ ಮತ್ತು ಪ್ರತಿ ಜಿಲ್ಲೆಯಲ್ಲಿ ವೃದ್ಧಾಶ್ರಮಗಳನ್ನು ಸ್ಥಾಪಿಸುವ ಅಂಶಗಳನ್ನು ಒಳಗೊಂಡಿರುತ್ತದೆ.

➢ **ನಿರ್ವಹಣಾ ನ್ಯಾಯಮಂಡಳಿ:** ಪ್ರತಿ ಕಂದಾಯ ಉಪವಿಭಾಗದಲ್ಲಿ ನ್ಯಾಯಮಂಡಳಿಯನ್ನು ಸ್ಥಾಪಿಸಿದ್ದು, ಆಯಾ ಕಂದಾಯ ಉಪವಿಭಾಗದ ಸಹಾಯಕ ಆಯುಕ್ತರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಹಾಗೂ ಸದರಿ ನಿರ್ವಹಣಾ ನ್ಯಾಯಮಂಡಳಿಯ ಅಧ್ಯಕ್ಷರೇ ರೂ.10,000/-ಗಳ ಗರಿಷ್ಠ ಮಿತಿಗೆ ಒಳಪಟ್ಟು ಪೋಷಣಾ ಭತ್ಯೆಯನ್ನು ನಿಗದಿಪಡಿಸಲು ಅವಕಾಶವಿರುತ್ತದೆ.

➢ **ಮೇಲ್ಮನವಿ ನ್ಯಾಯಮಂಡಳಿ:** ನಿರ್ವಹಣಾ ನ್ಯಾಯಮಂಡಳಿಯ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸ್ವೀಕರಿಸಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮೇಲ್ಮನವಿ ನ್ಯಾಯ ಮಂಡಳಿಯನ್ನು ರಚಿಸಲಾಗಿದೆ.

➢ **ಕಾಯ್ದೆಯ ನಿರ್ವಹಣಾಧಿಕಾರಿಗಳು**: ಆಯಾ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ನಿರ್ವಹಣಾಧಿಕಾರಿಗಳೆಂದು ನೇಮಿಸಲಾಗಿದೆ.

➢ **ಕಾಯ್ದೆಯ ಅನುಷ್ಠಾನಕ್ಕೆ ಭಾಗಿದಾರ ಇಲಾಖೆ/ಸಂಸ್ಥೆಗಳು:**

1. ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
2. ಕಂದಾಯ ಇಲಾಖೆ: ಉಪವಿಭಾಗಾಧಿಕಾರಿಗಳು- ನಿರ್ವಹಣಾ ನ್ಯಾಯಮಂಡಳಿ, ಸಂಧಾನಾಧಿಕಾರಿಗಳು ಮೇಲ್ಮನವಿ ಪ್ರಾಧಿಕಾರಿಗಳು-ಜಿಲ್ಲಾಧಿಕಾರಿಗಳು
3. ಗೃಹ ಇಲಾಖೆ
4. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
5. ವಾರ್ತಾ ಮತ್ತು ಪ್ರಚಾರ ಇಲಾಖೆ
6. ಪಂಚಾಯತಿಗಳು ಮತ್ತು ಪುರಸಭೆ
7. ಶಿಕ್ಷಣ ಸಂಸ್ಥೆಗಳು.

ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳಲ್ಲಿ ಸ್ವೀಕೃತವಾಗುವ ದೂರುಗಳನ್ನು ಪರಿಶೀಲಿಸಿ ದೂರುಗಳ ಅನುಗುಣವಾಗಿ ಆಯಾ ಕಂದಾಯ ಉಪ ವಿಭಾಗದ ಸಹಾಯಕ ಆಯುಕ್ತರ ಅಧ್ಯಕ್ಷತೆಯ ನ್ಯಾಯಮಂಡಳಿಯಲ್ಲಿ ತೀರ್ಮಾನಿಸಿ ಸೂಕ್ತ ಆದೇಶ ಹೊರಡಿಸಲಾಗುತ್ತದೆ. ಸದರಿ ಆದೇಶದ ವಿರುದ್ಧ ಹಿರಿಯ ನಾಗರಿಕರಿಗೆ ಅಸಮಾಧಾನವಿದ್ದಲ್ಲಿ ಮೇಲ್ಮನವಿ ದೂರನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬಹುದಾಗಿರುತ್ತದೆ.

ಹಿರಿಯ ನಾಗರಿಕರ ನಿರ್ವಹಣೆ ಮತ್ತು ರಕ್ಷಣಾ ಕಾಯ್ದೆಯು ಮಕ್ಕಳು ಪೋಷಕರನ್ನು ತ್ಯಜಿಸುವ ಪ್ರವೃತ್ತಿಯನ್ನು ತಡೆಗಟ್ಟಲು ಇಂತಹ ಮಕ್ಕಳಿಗೆ/ಪೋಷಕರಿಗೆ 3 ತಿಂಗಳ ಜೈಲು ವಾಸ ಮತ್ತು ರೂ.5000/- ದಂಡ ಅಥವಾ ಎರಡೂ ವಿಧಿಸಲು ಅವಕಾಶವಿರುತ್ತದೆ.

**ಸಂಖ್ಯೆ:ಮಮಇ 314 ಪಿಹೆಚ್‌ಪಿ 2024**

**(ಲಕ್ಷ್ಮೀ ಆರ್. ಹೆಬ್ಬಾಳ್ಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು